**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಶ್ರೀ ಎ. ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಶಹಾಪೂರ ಇವರು ಮಾಹಿತಿ ಹಕ್ಕು ಅಧಿ ನಿಯಮದಡಿ ಮಾಹಿತಿ ನೀಡದಿರುವ ಬಗ್ಗೆ ಶಿಸ್ತು ಕ್ರಮ.

**ಓದಲಾಗಿದೆ:-**

(1) ಕೃಷಿ ಆಯುಕ್ತರ ಪತ್ರ ಸಂ. ಸಿಬ್ಬಂದಿ-1/ವಿಚಾರಣೆ-3/12/2009-10, ದಿನಾಂಕ: 25-09-2010

(2) ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರ ಸಂ. ಕೃತೋಇ 66 ಕೃಪವಿ 2010, ದಿನಾಂಕ: 1/05-04-2011.

(3) ಕೃಷಿ ಆಯುಕ್ತರ ಪತ್ರ ಸಂ. ಸಿಬ್ಬಂದಿ-1/ವಿಚಾರಣೆ/3/12/2009-10, ದಿನಾಂಕ: 06-07-2011.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ.(1)ರ ಕೃಷಿ ಆಯುಕ್ತರ ದಿನಾಂಕ: 25-09-2010ರ ಪತ್ರದಲ್ಲಿ, ಶ್ರೀರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಶಹಾಪೂರ ಇವರು, ಶ್ರೀ ಶರಣಪ್ಪ ಕ್ಯಾತನ್ಯಾಳ ದೊಡ್ಡಮನಿ, ಎಂ.ಆರ್.ಎಚ್.ಎಸ್. ಶಾಖೆ, ಶಹಾಪೂರ ಹಿಂದಿನ ಗುಲಬರ್ಗಾ ಜಿಲ್ಲೆ ಪ್ರಸ್ತುತ ಯಾದಗಿರಿ ಜಿಲ್ಲೆ ಇವರು ಸಹಾಯಕ ಕೃಷಿ ನಿರ್ದೇಶಕರು, ಶಹಪೂರ ಇವರಿಗೆ ಅರ್ಜಿ ಸಲ್ಲಿಸಿದ್ದು, ಕರ್ನಾಟಕ ಮಾಹಿತಿ ಹಕ್ಕು ಅಧಿ ನಿಯಮ 2005ರನ್ವಯ ಮಾಹಿತಿ ಕೋರಿದ ಸದರಿಯವರಿಗೆ ಮಾಹಿತಿ ನೀಡದೇ ಇರುವುದರಿಂದ, ಕರ್ನಾಟಕ ರಾಜ್ಯ ಮಾಹಿತಿ ಆಯೋಗ, ಬೆಂಗಳೂರು, ಇವರು ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು ಶಹಪೂರ ಇವರಿಗೆ ರೂ. 25,000/-ಗಳ ದಂಡ ವಿಧಿಸಿದ್ದು, ಇವರು ಸದರಿ ದಂಡವನ್ನು ಪಾವತಿಸದೇ ಕರ್ತವ್ಯ ಲೋಪ ಎಸಗಿದ್ದಕ್ಕಾಗಿ, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಪ್ರಸ್ತಾವನೆ ಸಲ್ಲಿಸಿದ್ದು, ಅದರಂತೆ ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು ಶಹಪೂರ ಇವರಿಗೆ ಕೆ.ಸಿ.ಎಸ್. (ಸಿ.ಸಿ.ಎ) ನಿಯಮಾವಳಿ, ನಿಯಮ 11ರಡಿಯಲ್ಲಿ ಕಾರಣ ಕೇಳುವ ಪತ್ರವನ್ನು ಕ್ರಮಾಂಕ(2)ರಲ್ಲಿ ಓದಲಾದ ಪತ್ರದಲ್ಲಿ ಜಾರಿ ಮಾಡಲಾಗಿತ್ತು.

ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ಪತ್ರದಲ್ಲಿ ಕೃಷಿ ಆಯುಕ್ತರು, ಶ್ರೀ ಎ. ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಶಹಪೂರ ಇವರು ಮಾಹಿತಿ ಹಕ್ಕು ಅಧಿನಿಯಮದಡಿ, ಮಾಹಿತಿ ನೀಡದೇ ಇರುವುದರಿಂದ ಮಾಹಿತಿ ಆಯೋಗದಿಂದ ವಿಧಿಸಲಾದ ರೂ. 25,000/-ಗಳ ದಂಡವನ್ನು ಸ್ಟೇಟ್ ಬ್ಯಾಂಕ್ ಆಫ್ ಹೈದ್ರಬಾದ್, ಶಹಾಪೂರ ಬ್ರಾಂಚ್ ಇಲ್ಲಿ ದಿನಾಂಕ 20-12-2010ರಂದು ಜಮಾ ಮಾಡಿದ್ದಾರೆಂದು, ಚಲನಿನ ಪ್ರತಿಯನ್ನು ಲಗತ್ತಿಸಿ, ಸದರಿಯವರು ದಂಡವನ್ನು ಪಾವತಿಸಿರುವುದರಿಂದ, ಈ ಹಂತದಲ್ಲಿ ಅಧಿಕಾರಿಯವರಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಬಹುದಾಗಿದೆ ಎಂದು ಕೃಷಿ ಆಯುಕ್ತರು ಕೋರಿದ್ದರು.

--2--

48

ಕೃಷಿ ಆಯುಕ್ತರ ಅಭಿಪ್ರಾಯದ ಬಗ್ಗೆ ಪರಿಶೀಲಿಸಿ, ಶ್ರೀ ಎ. ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಶಹಾಪೂರ ಇವರು ಮಾಹಿತಿ ಹಕ್ಕು ಆಯೋಗ ವಿಧಿಸಿದ ದಂಡದ ಹಣವನ್ನು ಸಂದಾಯ ಮಾಡಿರುವುದರಿಂದ ಅವರ ಮೇಲೆ ಕೈಗೊಳ್ಳಲು ಉದ್ದೇಶಿಸಿರುವ ಶಿಸ್ತು ಪ್ರಕ್ರಿಯೆಯನ್ನು ಕೈ ಬಿಟ್ಟು ಇಂತಹ ವಿಷಯಗಳಲ್ಲಿ ಇನ್ನು ಮುಂದೆ ಜಾಗರೂಕತೆಯಿಂದ ವರ್ತಿಸಿ, ಮಾಹಿತಿ ಕೋರಿರುವ ಸಾರ್ವಜನಿಕರಿಗೆ ನಿಗದಿತ ಅವಧಿಯೊಳಗೆ ಮಾಹಿತಿ ನೀಡುವಂತೆ ಸೂಚಿಸಿ, ಸದರಿಯವರ ಕರ್ತವ್ಯ ಲೋಪಕ್ಕಾಗಿ, ''ಎಚ್ಚರಿಕೆ,, ನೀಡಲು ನಿರ್ಧರಿಸಿದೆ. ಅದರಂತೆ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಕೃಇ 66 ಕೃಪವಿ 2010,</u>**

**<u>ಬೆಂಗಳೂರು ದಿನಾಂಕ: 28-10-2011.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಎ. ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಶಹಾಪೂರ ಹಾಲಿ ಸಹಾಯಕ ಕೃಷಿ ನಿರ್ದೇಶಕರು ಯಾದಗಿರ ಇವರ ಮೇಲೆ ಹೂಡಲು ಉದ್ದೇಶಿಸಿರುವ ಶಿಸ್ತು ಪ್ರಕ್ರಿಯೆಯನ್ನು ಕೈ ಬಿಟ್ಟು ಮಾಹಿತಿ ನೀಡುವಂಥ ವಿಷಯಗಳಲ್ಲಿ ಇನ್ನು ಮುಂದೆ ಜಾಗರೂಕತೆಯಿಂದ ವರ್ತಿಸಿ, ಮಾಹಿತಿ ಕೋರುವ ಅರ್ಜಿದಾರರಿಗೆ ನಿಗದಿತ ಅವಧಿಯೊಳಗೆ ಮಾಹಿತಿ ನೀಡುವಂತೆ ಸೂಚಿಸಿ " ಎಚ್ಚರಿಕೆ ,, ನೀಡಿ ಪ್ರಕರಣವನ್ನು ಮುಕ್ತಾಯ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
28/10/2011

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) . ಕರ್ನಾಟಕ ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.ಆಯುಕ್ತರು, ಕರ್ನಾಟಕ ರಾಜ್ಯ ಮಾಹಿತಿ ಆಯೋಗ, ಬೆಂಗಳೂರು (KIC 6174 COM 2008 dated 05-10-2009)
3) ಜಂಟಿ ಕೃಷಿ ನಿರ್ದೇಶಕರು, ಯಾದಗಿರ್, ಯಾದಗಿರ್ ಜಿಲ್ಲೆ.
4) ಸಹಾಯಕ ಕೃಷಿ ನಿರ್ದೇಶಕರು, ಶಹಾಪೂರ ಯಾದಗಿರ ಜಿಲ್ಲೆ.
5) ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಕಾರ್ಯದರ್ಶಿಯವರಿಗೆ.
6) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7) ಸರ್ಕಾರದ ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಸಹಾಯಕರಿಗೆ.
8) ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.